**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ.1385/2014**

| | | |
|---|---|---|
| ಹೆಸರು | ಎ.ಟಿ ಸುರೇಶ್ | ಪ್ರಾ.ಸಾ.8 |
| ತಂದೆ ಹೆಸರು | ತಿಮ್ಮೇಗೌಡ | ಚಾ.ಸಾ.9 |
| ವಯಸ್ಸು | 50 ವರ್ಷ | |
| ಕೆಲಸ | ಹಿರಿಯ ಮೋಟಾರು ವಾಹನ ನಿರೀಕ್ಷಕರು | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು | ದಿ:30.01.2024 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು 2012 ರಿಂದ 2021 ರವರೆಗೆ ಆರ್.ಟಿ.ಓ., ಕೆ.ಆರ್.ಪುರಂನಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ:14.03.2014 ರಂದು ನಂದಗುಡಿ ಪೋಲೀಸ್ ಕೋರಿಕೆ ಮೇರೆಗೆ ಅದೇ ದಿನ ಠಾಣಾ ಮಧ್ಯಾಹ್ನ 1.45 ಗಂಟೆಗೆ ಆವರಣದಲ್ಲಿ ನಿಂತಿದ್ದ ಸಂ:ಕೆಎ-53-ಬಿ-2949 ಟಾಕ್ಸಿ ಮತ್ತು ಸಿ.ಟಿ.ಕೆ-626 ಟಿ.ವಿ.ಎಸ್. ಮೋಟಾರ್ ಸೈಕಲ್ ನ್ನು ತಪಾಸಣೆ ಮಾಡಲಾಗಿ ಅವುಗಳ ಜಖಂಗಳನ್ನು ವರದಿಯಲ್ಲಿ ನಮೂದಿಸಿರುತ್ತೇನೆ. ಕೆ.ಎ.53-ಬಿ-2949 ವಾಹವನ್ನು ಚಲಾಯಿಸಿ ನೋಡಿದ್ದು, ಇನ್ನೋಂದು ಸಿ.ಟಿ.ಕೆ-626 ವಾಹನವನ್ನು ಸ್ಥಳದಲ್ಲೇ ಪರೀಕ್ಷಿಸಲಾಗಿ ಮೊದಲ ವಾಹನದ ತಡೆಗಳು ಸುಸ್ಥಿತಿಯಲ್ಲಿದ್ದವು, ಎರಡನೇ ವಾಹನದ ತಡೆಗಳ ವ್ಯವಸ್ಥೆ ಸುಸ್ಥಿತಿಯಲ್ಲಿತ್ತು. ನನ್ನ ಅಭಿಪ್ರಾಯದಲ್ಲಿ ಈ ಅಪಘಾತವು ವಾಹನಗಳ ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ, ಆ ಕುರಿತು ನಾನು ವರದಿಯನ್ನು ನೀಡಿರುತ್ತೇನೆ.

ಸಾಕ್ಷಿಯು ದಿ:14.03.2014 ರ ವಾಹನ ತಪಾಸಣಾ ವರದಿ ನಿ.ಪಿ.10 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದದು, ಅದನ್ನು ನಿ.ಪಿ.10(ಬಿ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:-**

ಗಾಯಾಳುವಿಗೆ, ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ನಾನು ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಹೊಸಕೋಟೆ.**